ಸಾಧ್ಯವೇ ಆಗಲಿಲ್ಲ. ಮನೆಗೆ ಹೋಗುವಾಗಲೂ ಮನೆಯಲ್ಲಿ ರಾತ್ರೆ ಮಲಗಿಕೊಂಡಾಗಲೂ ಟೀವಿ ನೋಡುವುದರಲ್ಲಿ ಏನು ತಪ್ಪು ಎಂಬ ಪ್ರಶ್ನೆಯೆ ಅವಳನ್ನು ಕೊರೆಯುತ್ತಿತ್ತು.

ಮರುದಿನ ಬೆಳಗ್ಗೆ ಎಂದಿನಂತೆ ಕಸ ತೆಗೆದು ಅಂಗಳಕ್ಕೆ ಸಗಣಿ ನೀರು ಹಾಕುವಾಗ ಅಲ್ಲಿಗೆ ಬಂದ ರಾಜಪ್ಪ ವಿನಾಕಾರಣ 'ಏನಮ್ಮಾ ರಾಮಕ್ಕ ಚೆನ್ನಾಗಿದ್ದೀಯ?' ಎಂದು ಕುಶಲ ವಿಚಾರಿಸಿದ. 'ಬೇಕಾದ್ರೆ ನಾನು ನಿಂಗಯ್ಯಂಗೆ ಹೇಳ್ತೀರ್ನಿ. ಮನೆಗೆ ಹೋಗುವಾಗ ಸಂಜೆ ಕರೆದ ಹಾಲು ಸ್ವಲ್ಪ ತೆಗೆದುಕೊಂಡು ಹೋಗು ಮಕ್ಕಳಿಗಾಗುತ್ತೆ' ಎಂದ. ಆತ ಹೇಳದಿದ್ದರೂ ಅವಳಾಗಲೆ ಹಾಲು ಮನೆಗೆ ತೆಗೆದುಕೊಂಡು ಹೋಗುತ್ತಿದ್ದುದರಿಂದ ಅವಳಿಗೆ ಹೊಸತೇನೂ ಅನ್ನಿಸಲಿಲ್ಲ. ಆದರೆ, ಆತನ ವಿಚಿತ್ರ ನಡವಳಿಕೆ ಕಂಡವಳಿಗೆ, 'ಈ ವಯ್ಯ ನನ್ನ ಕಂಡ್ರೆ ಯಾಕೋ ಹೆದರಿದಂತಾಡ್ತಾನಲ್ಲ?' ಎಂದು ಅನ್ನಿಸತೊಡಗಿತು. ಆಮೇಲೆ ಮತ್ತದೆ ಪ್ರಶ್ನೆ ಅವಳನ್ನು ಕಾಡತೊಡಗಿತು. 'ಟೀವಿ ನೋಡೋದ್ರಲ್ಲಿ ತಪ್ಪೇನದೆ?'

ರಾಜಪ್ಪನ ಭಯ ಏನೆಂಬುದು ಅರ್ಥವಾಗದಿದ್ದರೂ ಅಲ್ಲಿಂದ ಮುಂದೆ ಅವನ ಭಯವನ್ನೆ ಬಂಡವಾಳವನ್ನಾಗಿಸಿಕೊಂಡ ರಾಮಕ್ಕನು ಅಗತ್ಯ ಬಿದ್ದಾಗಲೆಲ್ಲ ರಾಜಪ್ಪನಿಂದ ದುಡ್ಡು ವಸೂಲು ಮಾಡುವುದನ್ನು ಅಭ್ಯಾಸ ಮಾಡಿಕೊಂಡಳು. ಆ ವರ್ಷದ ರಾಮಕ್ಕನ ಮಕ್ಕಳ ಸ್ಕೂಲು ಫೀಸು, ಪುಸ್ತಕ, ಬಟ್ಟೆ ಎಲ್ಲದಕ್ಕೂ 'ರಾಜಪ್ಪಸಾಮಿ'ಯೆ ದುಡ್ಡು ತೆರಬೇಕಾಯ್ತು. ಯಾರದ್ದೋ ನೆಂಟರ ಮನೆ ಮದುವೆಗೆ ಹೊರಟಾಗ ಮದುಮಕ್ಕಳಿಗೆ ಮುಯ್ಯಿ ಮಾಡಲು ಇನ್ನೂರೈವತ್ತು ರೂಪಾಯಿ, ಕೊನೆಗೆ ಮದುವೆಯಲ್ಲಿ ರಾಮಕ್ಕ ಉಡಲು ಒಂದು ಹೊಸ ಸೀರೆಗೆ ಐನೂರು ರೂಪಾಯಿ ಕೂಡಾ ಸಾಮಿಯದೆ ದುಡ್ಡು! ಕೊನೆಕೊನೆಗೆ ಇದೇಕೋ ವಿಪರೀತಕ್ಕೆ ಹೋಗ್ತಾ ಇದೆಯಲ್ಲ ಹಿಂಗಾದರೆ ತಾನು ಹೇಗೆ ದುಡ್ಡು ಹೊಂದಿಸುವುದು, ಆಶ್ರಮದ ಹಣಕ್ಕೆ ಲೆಕ್ಕ ಏನು ಬರೆಯುವುದು ಎಂದು ಅವನಿಗೆ ಭಯವಾಗತೊಡಗಿತು. ಆದರೂ ವಿಧಿಯಿಲ್ಲ. ಹಗ್ಗ ಕೊಟ್ಟು ಕೈಕಟ್ಟಿಸಿಕೊಂಡಂತಾಗಿದೆ. ಅವಳೆಲ್ಲಾದರೂ ಊರಲ್ಲಿ ತನ್ನ ಟೀವೀ ವೀಕ್ಷಣೆಯ ಬಗ್ಗೆ ಬಾಯಿ ಬಿಟ್ಟರೆ ತನ್ನ ವರ್ಚಸ್ಸು? ಇಮೇಜು?

ರಾಜಪ್ಪನು ತಾನು ಕೇಳಿದಾಗೆಲ್ಲಾ ದುಡ್ಡು ಕೊಡುತ್ತಿದ್ದರೂ ರಾಮಕ್ಕನ ಮನಸ್ಸಲ್ಲಿ ಸಂಶಯವೊಂದು ಕೊರೆಯುತ್ತಾ ಹೋಯಿತು. ಸಾಮಿಯು ಹೀಗೆ ಹೆದರಬೇಕಾದರೆ ಆವತ್ತು ಟೀವಿಯಲ್ಲಿ ನೋಡುತ್ತಿದ್ದುದಾದರೂ ಏನು? ಈ ಪ್ರಶ್ನೆಯು ಅವಳನ್ನು ಕೊರೆಯುತ್ತಾ ಕೊರೆಯುತ್ತಾ ಕೊನೆಗೊಂದು ದಿನ ಒತ್ತಡವನ್ನು ತಡೆಯಲಾರದೆ 'ರಾಜಪ್ಪಸಾಮಿ ನೀವು ಅವತ್ತು ಟೀವಿಯಲ್ಲಿ ಏನು ನೋಡ್ತಾ ಇದ್ದದ್ದು?' ಎಂದು ಕೇಳಿಯೇಬಿಟ್ಟಳು.

ಅವಳ ಮಾತನ್ನು ಕೇಳಿ ರಾಜಪ್ಪನಿಗೆ ದಿಗ್ಭ್ರಮೆಯಾಯಿತು. 'ಹಾಗಾದರೆ ನಾನೇನು ನೋಡುತ್ತಿದ್ದೆ ಎಂದು ಇವಳಿಗೆ ಗೊತ್ತೇ ಇಲ್ಲ. ನಾನು ಸುಖಾಸುಮ್ಮನೆ ಹೆದರಿಕೊಂಡು ಇವಳಿಗೆ ದುಡ್ಡು ಕೊಡುತ್ತಿದ್ದೆನಲ್ಲ?' ಎನ್ನಿಸಿ 'ರಾಮಕ್ಕ ನೀನು ಅದೇನೆಂದು ನೋಡಲಿಲ್ವ?' ಎಂದು ಕೇಳಿದ.

'ಇಲ್ಲ ಸಾಮಿ, ಟೀವಿ ನಿಮ್ಮ ಕಡೆ ತಿರುಗಿತ್ತಲ್ಲ ನಂಗೇನೂ ಕಾಣಲಿಲ್ಲ'

ಉಕ್ಕಿಬಂದ ಕೋಪದಿಂದ ರಾಜಪ್ಪ ಆರ್ಭಟಿಸಿದ 'ತೊಲಗಿಲ್ಲಿಂದ, ಇನ್ನು ಮೇಲೆ ಆಶ್ರಮದ ಕಡೆ ಬರಬೇಡ. ನಿನ್ನ ಕೆಲಸಕ್ಕೆ ಬೇರೆ ಯಾರಾದ್ರೂ ಬರ್ತಾರೆ.'

ಅವನ ಆರ್ಭಟಕ್ಕೆ ಬೆದರಿದ ರಾಮಕ್ಕ ಅಲ್ಲಿಂದ ನಿರ್ಗಮಿಸಿದಳು. ಆವತ್ತು ಅದೇನು ನೋಡುತ್ತಿರಬಹುದು ಎಂಬ ಪ್ರಶ್ನೆಯ ಜೊತೆಗೆ ಈ ಸಾಮಿಗೆ ಇವತ್ಯಾಕೆ ಈಸೊಂದು ಕೋಪ ಬಂತೋ ಎಂಬ ಮತ್ತೊಂದು ಪ್ರಶ್ನೆಯೂ ಸೇರಿಕೊಂಡಿತು. ಜೊತೆಗೆ ತಿಂಗಳಿಗೆ ಎರಡು ಸಾವಿರ ಸಿಕ್ಕುತ್ತಿದ್ದ ಪಾರ್ಟುಟೈಮು ಕೆಲಸವೂ ಹೋಯ್ತು. ಆಗಾಗ ಕೈಖರ್ಚಿಗೆ ಸಿಕ್ಕುತ್ತಿದ್ದ ಮೇಲಾದಾಯವೂ ಹೋಯ್ತು ಎಂದು ದುಃಖವೂ ಆಗತೊಡಗಿತು.

ಅದೇ ದುಃಖದಲ್ಲಿ ಮನೆಗೆ ಬಂದಾಗ ಎದುರಿಗೆ ಬಂದ ಗಂಡ ಸಂಜೆ ಖರ್ಚಿಗೆ ದುಡ್ಡು ಕೇಳಿದಾಗ ಭಯಂಕರ ಕೋಪ ಬಂದು ಅವನಿಗಿಷ್ಟು ಹೀನಾಮಾನವಾಗಿ ಬೈದು ಒಳಗೆ ಹೋಗಿ ರಾತ್ರೆಗೆ ಮಕ್ಕಳಿಗೇನು ಅಡಿಗೆ ಮಾಡಲಿ ಎಂದು ಹವಣಿಸತೊಡಗಿದಳು. ರಾತ್ರೆ ಕೆಲಸಗಳನ್ನೆಲ್ಲ ಮುಗಿಸಿ ಮಲಗಿದಾಗಲೂ ರಾಜಪ್ಪಸಾಮಿ ಬೈದದ್ದೇಕೆ, ಅಸಲಿಗೆ ಇಷ್ಟು ದಿನ ದುಡ್ಡು ಕೊಡುತ್ತಿದ್ದುದೇಕೆ ಎಂಬುದೆ ಅರ್ಥವಾಗಲಿಲ್ಲ. ಹಾಗಾದರೆ ಆತ ಅಂತಹುದೇನು ಟೀವಿಯಲ್ಲಿ ನೋಡುತ್ತಿದ್ದ ಎಂಬುದೇ